ಮೈಸೂರ ಗೆಜಿಟ್ಟು.

ನಂ. 45 ಸರ್ಕಾರದಿಂದ ಫಾಯಿಷ್ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ನವೆಂಬರ್ ತಾ|| 12, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ರಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್‌ಸ್ ಆಫೀಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 29ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1661.—ಈ ಆಫೀಸಿನ 1887ನೇ ಇಸವಿ ಅಕ್ಟೋಬರ್ 13ನೇ ಮುಕ್ತಂ 1494ನೇ ನಂಬರ್ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ, ಅಮಲ್‌ದಾರ್ ಯರ್. ವೆಂಕಟರಾಯರಿಗೆ ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ದೇವನಹಳ್ಳಿ ತಾಲ್ಲೂಕಿನಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಅಮಲ್‌ದಾರ್ ಲಕ್ಷ್ಮಣರಾಯರ ವರ್ಗಾವರ್ಗಿಯೂ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಿಂದ ಗುಬ್ಬಿ ತಾಲ್ಲೂಕಿಗೆ ಶ್ರೀಕಂಠಯ್ಯನವರ ವರ್ಗಾವರ್ಗಿಯೂ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1671.—ಬೆಂಗಳೂರು ಷಹರ್ ಮ್ಯುನಿಸಿಪೆಲ್ ಕಮ್ಮಿಷನ್ನಿನ ವೈಸ್ ಪ್ರೆಸಿಡೆಂಟ್ ಮೆ|| ಎ. ಶ್ರೀನಿವಾಸಾಚಾರ್ಲುಯವರಿಗೆ, 1887ನೇ ಇಸವಿ ಅಕ್ಟೋಬರ್ 21ನೇ ಮುಕ್ತಂ ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಸ್ವಂತ ಕೆಲಸದ ಮೇಲೆ ಯರಡು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 12ನೇ ಸೆಪ್ಟಂಬರ್ 1887ನೇ ಇಸವಿ.

ನಂ. 113.—1887ನೇ ಇಸವಿ ಸೆಪ್ಟಂಬರ್ 5ನೇ ಮುಕ್ಕಂ 107ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಕಲಂ ಪ್ರಕಾರ ಗನೀ ಕೆಲಸ ನಡಿಸುವ ಬಗ್ಗೆ ಲೈಸೆನ್ಸ್ ಕೊಡಲ್ಪಡಬೇಕಾದ ಜಮೀನಿನ ವಿಸ್ತೀರ್ಣದ ವಿಷಯದಲ್ಲಿ ಚಾಲತೀ ವರುಷಕ್ಕೆ 35 ಚದರ್ ಮೈಲಿಗಳ ಮಟ್ಟಿಗೆ ಕೊಡಲ್ಪಡತಕ್ಕದ್ದೆಂದು ಶ್ರೀಮಂ ಮಹಾರಾಜಾ ಸರ್ಕಾರದವರು ಗೊತ್ತು ಮಾಡಿರುವದರಿಂದಲೂ ಮತ್ತು ಇದಕ್ಕೆ ಶೇರಿಸೋಣಾದ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಪ್ರತಿ ತಾಕಿನ ವಿಷಯದಲ್ಲೂ ಗನೀ ಕೆಲಸ ನಡಿಸುವ ಲೈಸೆನ್ಸಿಗೋಸ್ಕರ ಅಂದಕ್ಕಿಂತಲೂ ಜಾಸ್ತಿಯಾಗಿ ದರಖಾಸ್ತುಗಳು ಬಂದಿರುವದರಿಂದಲೂ ಮತ್ತು ಸರ್ಕಾರದವರು, ಮೇಲ್ಕಂಡ ಪ್ರತಿ ತಾಕಿಗೂ ಬಹಿರಂಗವಾದ ಚಡ ದರಖಾಸ್ತು ಮೂಲಕ ಹುಟ್ಟಬಹುದಾದಂಥಾ ಪ್ರೀಮಿಯಮ್‌ಯಾನೇ ನಫೆಗೆ ಗನೀ ಕೆಲಸದ ಲೈಸೆನ್ಸ್ ಕೊಡಲ್ಪಡತಕ್ಕದ್ದೆಂದು ನಿಷ್ಕರ್ಷೇ ಮಾಡಿರುವದರಿಂದ ಮೇಲ್ಕಂಡ ಲೈಸೆನ್ಸಿಗಳಿಗೋಸ್ಕರ, ಇದರಜೀಕಂಡ ಷರತ್ತುಗಳಿಗೆ ಬಳಪಟ್ಟು ಯಿದರ ಮೇಲಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತವೆ:—

I. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತು ಮಾಡಲ್ಪಟ್ಟ ಗೊತ್ತಾದ ತಕ ನಮೂದಿಸಲ್ಪಡತಕ್ಕದ್ದಲ್ಲದೆ ಸದರೀ ತಾಕಿನ ಲೈಸೆನ್ಸಿಗೋಸ್ಕರ ದರಖಾಸ್ತುದಾರನು ಪಾವತೀ ಮಾಡುವದಕ್ಕೆ ಒಪ್ಪುವ ನಫೇ ಮೊಬಲಗು ಸುದಾ ಕಾಣಿಸಲ್ಪಡತಕ್ಕದ್ದು, ಲೈಸೆನ್ಸಿನ ಷರತ್ತುಗಳು ಇದಕ್ಕೆ ಶೇರಿಸೋಣಾದ B ನಮೂನೆಯಲ್ಲಿ ವಿವರಿಸಲ್ಪಟ್ಟಂತೆ ಯಿರುತವೆ. ನಫೇ ಮೊಬಲಗು ಪೌಂಡ್ ಸಂಖೆಯಲ್ಲಾಗಲೀ ರೂಪಾಯಿ ಸಂಖೆಯಲ್ಲಾಗಲೀ ತಿಳಿಸಲ್ಪಡತಕ್ಕದ್ದು.

II. ಪ್ರತಿ ದರಖಾಸ್ತಿನ ಸಂಗಡಲೂ, ಪಾವತೀ ಮಾಡುವದಕ್ಕೆ ಒಪ್ಪಿಕೊಳ್ಳುವ ನಫೇ ಮೊಬಲಗಿನ ದಶಮಾಂಶಕ್ಕೆ ಸರಿಯಾದ ಮೊಬಲಗು ಶೇವಣೀ ತರೀಕ್ ಕಳುಹಿಸಲ್ಪಡತಕ್ಕದ್ದಲ್ಲದೆ ಶೇವಣೀ ಮೊಬಲಗು ಮೈಸೂರು ದೇಶದ ದಿರ್ವಾರವರ ಹೆಸರಿಗೆ ಜಮೇ ಹಿಡಿಯತಕ್ಕ ಬಗ್ಗೆ ಮೈಸೂರು ದೇಶದ ಯಾವದಾದರೂ ಸರ್ಕಾರ್ ಖಜಾನೆಯಲ್ಲಾಗಲಿ ಯಿಂಡಿಯಾ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಿಯಾಗಲಿ ಅಥವಾ ಲಂಡ್ಜನಲ್ಲಿ 59ನೇ ಸ್ಟ್ರಾಂಡ್ ಸ್ಥಳದಲ್ಲಿರುವ ಮೆಸ್ಸಿಯರ್ಸ್ ಕಾಟ್ಸ್ ಅಂಡ್‌ಕೋಯವರಿಗಾಗಲಿ ಪಾವತೀ ಮಾಡಲ್ಪಟ್ಟು ಅಂಥಾ ಪಾವತೀ ಬಗ್ಗಾಗಿ ಪಡೆದ ರೇತಿಯು ದರಖಾಸ್ತಿನೊಂದಿಗೆ ಕಳುಹಿಸಲ್ಪಡತಕ್ಕದ್ದು.

III. ದರಖಾಸ್ತು, ಈ ಇಸ್ತಿಹಾರ್‌ನಾಮೆಗೆ ಲಗತ್ತಿರುವ C ನಮೂನೇಯಲ್ಲಿ ಬರೆಯಲ್ಪಡತಕ್ಕದ್ದು.

IV. ಮೇಲ್ಕಂಡ IIನೇ ಪ್ಯಾರಾ ಅನುಸರಿಸಿ ಪಾವತೀ ಮಾಡಲ್ಪಟ್ಟ ಶೆವಣೀಗೋಸ್ಕರ ಪಡೆದ ರೇತೀ ಸಹಿತವಾಗಿ ದರಖಾಸ್ತು ಬಂದು ಲಿಫಾಫೆಯಲ್ಲಿ ಹಾಕಿ ಮೊಹರ್ ಮಾಡಲ್ಪಟ್ಟು "ಗನೀ ಕೆಲಸದ ಗುತ್ತಿಗೇ ಬಗ್ಗೆ ದರಖಾಸ್ತು" ಯಂಬದಾಗಿ ಮೇಲೆ ಬರೆಯಲ್ಪಟ್ಟು ಬೆಂಗಳೂರ್‌ಲ್ಲಿ ಮೈಸೂರು ದೇಶದ ದಿರ್ವಾರವರ ಹೆಸರಿಗೆ ಮೇಲ್ ವಿಳಾಸ ಬರೆಯಲ್ಪಡತಕ್ಕದ್ದು.

V. ದರಖಾಸ್ತುಗಳು, ದಿರ್ವಾರವರಿಗೆ 1887ನೇ ಇಸವಿ ಡಿಸಂಬರ್ 10ನೇ ಮುಕ್ಕಮಿನ ಮಧ್ಯಾನ್ಹದಲ್ಲಿಯಾಗಲೀ ತತ್ಪೂರ್ವದಲ್ಲಿಯಾಗಲಿ ತಲಪಬೇಕಾಗಿರುತ್ತೆ. ಆಗ ಅವು ದಿರ್ವಾರವರಿಂದ ಬೆಂಗಳೂರಲ್ಲಿರತಕ್ಕ ಪಬ್ಲಿಕ್ ಆಫೀಸ್ ಯಂಬ ಕಟ್ಟಡದೊಳಗೆ, ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

VI. ದರಖಾಸ್ತುಗಳ ಆಖೈರ್ ವ್ಯವಸ್ಥೆಯು ದಿರ್ವಾರವರಿಗೆ ಶೇರಿರುತ್ತೆ. ಅವರು ಯಾವ ಕಾರಣವೂ ತಿಳಿಸದೇನೇ ಚಡ ದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

VII. ಯಾವ ದರಖಾಸ್ತು ದಿರ್ವಾರವರಿಂದ ಅಂಗೀಕರಿಸಲ್ಪಡುತಿದೆಯೋ ಅಂಥಾ ದರಖಾಸ್ತುದಾರನು, ಅಂಥಾ ಅಂಗೀಕಾರ ತನಿಗೆ ತಿಳಿಸಲ್ಪಟ್ಟ 30 ದಿವಸಗಳೊಳಗಾಗಿ ದರಖಾಸ್ತಿನಲ್ಲಿ ಪಾವತೀ ಮಾಡುವದಾಗಿ ಒಪ್ಪಿಕೊಂಡಿರುವ ನಫೇ ಮೊಬಲಗಿನ ಉಳಿದ ಭಾಗವನ್ನು ದಿರ್ವಾರವರ ಹೆಸರಿಗೆ ಜಮೇಕಟ್ಟುವ ಬಗ್ಗೆ ಮೈಸೂರು ದೇಶದ ಯಾವದಾದರೂ ಸರಕಾರದ ಖಜಾನೆಯಲ್ಲಾಗಲಿ, ಯಿಂಡಿಯ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕೆನ್ಸ್‌ಗಳಲೀ ಅಥವಾ ಲಂಡ್ಜ ಪಟ್ಟಣದ ಮೆಸ್ಸಿಯರ್ಸ್ ಕಾಟ್ಸ್ ಅಂಡ್‌ಕೋ ಯವರಿಗಾಗಲಿ ಪಾವತೀ ಮಾಡತಕ್ಕದ್ದು.

VIII. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರರ ಹೆಸರು ದೇಖೀಲ್ ಅವರ ದರಖಾಸ್ತುಗಳು ಯಾವದಕ್ಕೆ ಅಂಗೀಕರಿಸಲ್ಪಟ್ಟವು ತದೆಯೋ ಅಂಥಾ ತಾಕುಗಳ ವಿವರಣೆಯು ಸರ್ಕಾರೀ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಡುವದು.

IX. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಶೇವಣಿಯು, ಅವರು ಖಾಯಿಷ್ ಮಾಡಿದಾಗ ವಾಪಸ್ ಮಾಡಲ್ಪಡುವದು.

X. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು, ಗುತ್ತಿಗೇ ಕರಾರು ಹುಟ್ಟುವದಕ್ಕೆ ಮುಂಚೆ ಯಾವ ಕಾಲದಲ್ಲಿ ಆಗಲಿ ಇದಕ್ಕೆ ಲಗತ್ತಿರುವ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಸರಹದ್ದಿನೊಳಗಣ ತಾಕಿನಲ್ಲಿ ಮೊಕ್ತಾಂ ಮಾಡುವ ಬಗ್ಯೆ ಅವಕಾಶ ಕೊಡಲ್ಪಡುವನು, ಆದರೆ ಆತನು ಮೇಲೆಕಂಡ VIIನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಂತೆ ನಫೇ ಬಾಬತು ಉಳಿದ ಬಾಕಿಯನ್ನ ಪಾವತೀ ಮಾಡಿದ ತರುವಾಯ ಆರು ತಿಂಗಳ ವಳಗಾಗಿ ಗವರ್ನಮೆಂಟ್ ತರಫಿನಲ್ಲಿ ದಿರ್ವಾರವರಿಂದ ರುಜೂ ಮಾಡಲ್ಪಡುವ ಬಗ್ಯೆ ಇದಕ್ಕೆ ಜಂಟಿಸೋಣಾದ B. ಸಮೂನೆಯಲ್ಲಿ ತಯಾರ್ಮಾಡಲ್ಪಟ್ಟು ಕ್ರಮವಾಗಿ ಸ್ಟ್ಯಾಂಪ್‌ಹಾಕಲ್ಪಟ್ಟ ಗುತ್ತಿಗೇ ಕರಾರನ್ನು ಹಾಜರ್ಮಾಡತಕ್ಕದ್ದು.

XI. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು VIIನೇ ಪ್ಯಾರಾದಲ್ಲಿ ನಿಯಮಿಸಲ್ಪಟ್ಟ ಪ್ರಕಾರ ನಫೆಯ ಬಾಕೀ ಮೊಬಲಗೆನ್ನ ಪಾವತೀ ಮಾಡುವದಕ್ಕಾಗಲೀ Xನೇ ಪ್ಯಾರಾದಲ್ಲಿ ವಿಧಿಸಲ್ಪಟಂತೆ ಗುತ್ತಿಗೇ ಕರಾರನ್ನು ದಸ್ತಖತ್ತಿಗೋಸ್ಕರ ಹಾಜರ್ಮಾಡುವದಕ್ಕಾಗಲಿ ತಪ್ಪಿದರೆ ದರಖಾಸ್ತುದಾರನಿಂದ ದಿರ್ವಾರವರ ಹೆಸರಿಗೆ ಜಮೇಕಟ್ಟುವ ಬಗ್ಯೆ ಹಾಂಗೆ ತಪ್ಪಿಹೋದ ತಾರೀಖಿನ ವರಿಗೆ ಪಾವತೀ ಮಾಡಲ್ಪಟ್ಟಿರುವ ಶೇವಣೀ ಯಾ ಇತರ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೇ ಅಂಥಾ ಮೊಬಲಗು ಯಾವ ಬಗ್ಯೆ ಪಾವತೀ ಮಾಡಲ್ಪಟ್ಟಿತೋ ಅಂಥಾ ಜಮೀನುಗಳು ಸರ್ಕಾರದವರ ಯಖ್ತ್ಯಾರೀಯಲ್ಲಿ ಸಂಪೂರ್ಣವಾಗಿ ಯಿರತಕ್ಕದ್ದು.

XII. A ಷೆಡ್ಯೂಲ್‌ನಲ್ಲಿ ನಮೂದ್ ಮಾಡಲ್ಪಟ್ಟ ತಾಕುಗಳು ಯಿರತಕ್ಕ ಪ್ರದೇಶವನ್ನು ತೋರಿಸುವ ಮೈಸೂರು ದೇಶದ ಬ್ರಿಟಿಷ್ ಟೊಪೋಗ್ರ್ಯಾಫಿಕಲ್ ಸರ್ವೆ ಇಲಾಖೇಯಿಂದ ತಯಾರ್ಮಾಡಲ್ಪಟ್ಟ ಮ್ಯಾಪ್‌ಯಾನೇ ನಕ್ಷೆಯು (ಅಂಗುಲ ವಂದಕ್ಕೆ ವಂದುಮೈಲೀ ಫಾಸಲೆಯುಳ್ಳ) ನಕ್ಕಲು ಬೆಂಗಳೂರಲ್ಲಿರುವ ದಿರ್ವಾರವರ ಕಚೇರೀಯಲ್ಲಿ ಯಿರುವದು ಮತ್ತು ಅಂಡರ್ ಸೆಕ್ರಿಟರಿಯವರನ್ನ ಬೇಡಿದಲ್ಲಿ ಯಾರಿಗಾದರೂ ಬಗರ್ ಚಾರ್ಜ್ ನೋಡುವ ಬಗ್ಯೆ ಅವಕಾಶ ಕೊಡಲ್ಪಡುವದು.

ಹುಕ್ಕುಂ ಬಹೋಜೆಬ್,

ಆರ್. ವಿಜಯಿಂದ್ರರಾವ್,

ಚೀಫ್ ಸೆಕ್ರಟರಿ.